ಶ್ರೀ ಬಿ. ಎಲ್. ಗೌಡ.—ಭೂಗರ್ಭದಲ್ಲಿ ನೀರು ಇದ್ದರೆ ಅದಕ್ಕೆ ಬೇಕಾಗುವ ಹಣ ಇದ್ದರೆ ಇದನ್ನು ಮಾಡುತ್ತೇವೆ. ಇಷ್ಟೆ ದಿವಸಗಳಲ್ಲಿ ಮಾಡುತ್ತೇವೆ ಎಂದು ಹೇಳಲು ಆಗುವುದಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ನೀರಾವರಿ ಭಾಷಿ ತೋಡುವ ಯೋಜನೆ ಭೂಗರ್ಭದಲ್ಲಿ ದೊರೆಯುವ ನೀರನ್ನು ಅವಲಂಬಿಸಿದೆ. ನೀರು ಎಲ್ಲಿ ಸಿಕ್ಕುತ್ತದೆ ಎನ್ನುತಕ್ಕಂಥಾದ್ದನ್ನು ಪರೀಕ್ಷೆ ಮಾಡತಕ್ಕಂಥ ಮಾರ್ಗಗಳು ಯಾವುವು ? ಕಡ್ಡೀ ಹಿಡಿದು ನೋಡುವ ಶಾಸ್ತ್ರವನ್ನು ಪರಿಗಣಿಸುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಈಗಾಗಲೇ ಇದಕ್ಕೆ ಉತ್ತರ ಹೇಳಿದ್ದೇನೆ.

ಶ್ರೀ ಜಿ. ಟಿ. ಗೋವಿಂದರೆಡ್ಡಿ.—ಇಡೀ ತಾಲ್ಲೂಕಿನಲ್ಲಿ ಈ ಯೋಜನೆ ಅನ್ವಯಿಸುವ ಹಾಗೆ ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಅದಕ್ಕೆ ಉತ್ತರ ಹೇಳಿದ್ದೇನೆ. ಭೂಗರ್ಭಇರಾಖೆಯವರು ಎಲ್ಲಿ ನೀರು ದೊರೆಯುತ್ತದೆ ಎಂದು ಶಿಫಾರಸು ಮಾಡುತ್ತಾರೋ ಅಂಥ ಜಾಗದಲ್ಲಿ ಈ ಯೋಜನೆ ತೆಗೆದು ಕೊಳ್ಳುತ್ತೇವೆ. ಶ್ರೀಮಾನ್ ಗೋವಿಂದರೆಡ್ಡಿಯವರೇ ಆಗಲಿ ಅಥವಾ ಯಾರೇ ಸದಸ್ಯರಾಗಲಿ ಇಂಥ ಒಂದು ಜಾಗದಲ್ಲಿ ನೀರು ಬರುತ್ತದೆ ಎಂದು ಸಲಹೆ ಕೊಟ್ಟರೆ ಅಲ್ಲಿ ಪರಿಶೀಲನೆ ಮಾಡುತ್ತೇವೆ.

9-00 A.M.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ತುಮಕೂರು ಜಿಲ್ಲೆಯಲ್ಲಿ 3 ರಿಂದ 23 ಪರ್ಸೆಂಟಿನವರೆಗೆ ಕಡಿಮೆಯಾಗಿರುವುದು 4-6 ತಾಲ್ಲೂಕುಗಳಿವೆ. ಅಂತಹ ಕಡೆ ಪ್ರಯಾರಿಟಿ ಕೊಟ್ಟು ಇರ್ರಿಗೇಷನ್ ವೆಲ್ಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಇರ್ರಿಗೇಷನ್ ಈ ವರ್ಷ ಕಡಿಮೆ ಎನ್ನುವುದನ್ನು ಒಪ್ಪುತ್ತೇನೆ. ಮಾನ್ಯ ಸದಸ್ಯರು ಹೇಳಿದ ಒಂದು ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ.

State Fund Road in Chickmagalur District

151. Sri M. MALLAPPA (Birur).—

Will the Minister for Public Works be pleased to state :—

(*a*) the number of miles of road that have been taken over in Chickmagalur District as State Fund Roads (Talukwise details may be given for the past three years);

(*b*) the number of roads taken over as State Fund Roads that have been metalled and the amount spent for the said State Fund roads ;

(*c*) the number of years in which the Government would complete metalling all the roads converted as State Fund Roads in Chickmagalur District ?

Sri K. LAKKAPPA (Minister for Public Works).—

(*a*)— *Name of Taluka* | *Years*

	1966 M. F.	*1967* M. F.	*1968* M. F.
1. Chickmagalur	...	21-2	7-6
2. Kadur	...	...	24-0
3. Mudigere	...	...	6-2
4. Koppa	...	4-4	...
5. N. R. Pura	...	4-4	21-0

(*b*) No road is metalled. The total amount spent on these roads is Rs. 3,68,954.

(*c*) This depends upon the availability of funds and the necessity for metalling.

ಶ್ರೀ ಎಂ. ಮಲ್ಲಪ್ಪ.—ಸ್ವಾಮಿ, ಚಿಕ್ಕಮಗಳೂರು ಜಿಲ್ಲೆಯಲ್ಲಿ 1968ನೇ ಸಾಲಿನಲ್ಲಿ ಸುಮಾರು 58 ಮೈಲಿ ಸ್ಟೇಟ್ ಫಂಡ್ ರಸ್ತೆಗಳನ್ನಾಗಿಯೂ, 1967ನೇ ಸಾಲಿನಲ್ಲಿ ಸುಮಾರು 29 ಮೈಲಿ ಸ್ಟೇಟ್ ಫಂಡ್ ರಸ್ತೆಗಳನ್ನಾಗಿ ಮಾಡಿದ್ದೇವೆ ಎಂದು ಹೇಳಿದ್ದೀರಿ. ಆದರೆ (ಬ) ಗೆ ಉತ್ತರವಾಗಿ ಯಾವ ರಸ್ತೆಗಳಿಗೂ ಜಲ್ಲಿ ಕಲ್ಲು ಹಾಕಿರುವುದಿಲ್ಲ, ಈ ರಸ್ತೆಗಳ ಬಗ್ಗೆ ವೆಚ್ಚ ಮಾಡಿರುವ ಮೊಬಲಗು 3,68,954 ರೂಪಾಯಿಗಳು ಎಂದು ಹೇಳಿದ್ದೀರಿ. ಚಿಕ್ಕಮಗಳೂರು ಜಿಲ್ಲೆಗೆ ಇಷ್ಟೊಂದು ಹಣ ಖರ್ಚು ಮಾಡಿದ್ದೀರಲ್ಲಾ ಕಡೂರು ತಾಲ್ಲೂಕಿನಲ್ಲಿ ಎಷ್ಟು ಮೈಲಿ ರಸ್ತೆಗಳನ್ನು ರಿಪೇರಿ ಮಾಡಿದ್ದೀರಿ ?

ಶ್ರೀ ಕೆ. ಲಕ್ಕಪ್ಪ.—ಈ ರಸ್ತೆಗಳಿಗೆ ವೆಚ್ಚ ಮಾಡಿರುವ ಮೊಬಲಗು 3,68,954 ರೂಪಾಯಿಗಳು. ಆದರೆ ಜಲ್ಲಿ ಹಾಕಿರುವುದಿಲ್ಲ. ಜಲ್ಲಿ ಹಾಕಬೇಕಾದರೆ ಮೊದಲು ಮಣ್ಣಿನ ಕೆಲಸ ಮಾಡಿಕೊಂಡು ಅನಂತರ ಜಲ್ಲಿ ಕೆಲಸ ಮಾಡಬೇಕು. ಆದರೆ ಕಡೂರು ತಾಲ್ಲೂಕಿನ ವಿಚಾರ ಹೇಳಬೇಕಾದರೆ ಆದರ ವಿವರ ಈಗ ನನ್ನಲ್ಲಿಲ್ಲ. ಮತ್ತೊಂದು ಪ್ರಶ್ನೆ ಕೇಳಿದರೆ ಹೇಳುತ್ತೇನೆ.

ಶ್ರೀ ಎಂ. ಮಲ್ಲಪ್ಪ.—ಕಡೂರು ತಾಲ್ಲೂಕಿನ ರೋಡು ಮೆಟಲ್ ಮಾಡಿದರೆ ಎಂ. ಎಸ್. ಆರ್. ಟಿ. ಸಿ. ಬಸ್ ಬಿಡುತ್ತೇವೆ ಎಂದು ಹೇಳುತ್ತಾರೆ. ಅವರು ಪಿ. ಡಬ್ಲ್ಯು. ಡಿ. ಗೆ ಅನೇಕ ಬಾರಿ ಒತ್ತಾಯ ಮಾಡಿದರು. ರಸ್ತೆ ಯೋಗ್ಯರೀತಿ ಇಲ್ಲದೇ ಇದ್ದುದರಿಂದ 3 ವರ್ಷವಾದರೂ ಬಸ್ಸನ್ನು ಬಿಟ್ಟಿಲ್ಲ. ಇಲಾಖೆಯವರು ಸರ್ವೆ ಮಾಡಿದ್ದಾರೆ. ಬಸ್ ಬಿಡಬೇಕಾದರೆ ಮೆಟಲ್ ಕೆಲಸ ಆಗಬೇಕು. ಅದುದರಿಂದ ಇಲಾಖೆಯವರಿಗೆ ಸೂಚನೆ ಕೊಟ್ಟು ಅತಿ ಶೀಘ್ರವಾಗಿ ಆ ರೋಡುಗಳಿಗೆ ಮೆಟಲ್ ಕೆಲಸ ಆಗುವಂತೆ ಮಾಡಿಸುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ಯಾವ ರಸ್ತೆಗಳು ನಾದುರಸ್ತು ಆಗಿವೆಯೋ ಆ ವಿವರ ನನ್ನಲ್ಲಿಲ್ಲ. ಮಾನ್ಯ ಸದಸ್ಯರು ವಿವರ ಕೊಡುವುದಾದರೆ, ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಮಾಡಬಹುದು ಮತ್ತು ಈಗ ಇಂತಕ್ಕಂಥ ಹಣದ ಮಿತಿಯಲ್ಲಿ ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಮಾಡುತ್ತಾರೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಮಲೆನಾಡಿನ ಭಾಗದ ಕೊಪ್ಪದಲ್ಲಿ 3 ವರ್ಷದಿಂದ ಸುಮಾರು 4 ಮೈಲಿ ರಸ್ತೆಯನ್ನು ತೆಗೆದುಕೊಂಡಿದ್ದೀರಿ. ಇನ್ನೂ ಪ್ರಾಮುಖ್ಯವಾದ ರಸ್ತೆಗಳಿವೆ. ಅದರಲ್ಲಿ ಶೃಂಗೇರಿ ರಸ್ತೆ ಮುಖ್ಯವಾದುದು. ಅದನ್ನೂ ತೆಗೆದುಕೊಂಡಿಲ್ಲ. ಆದುದರಿಂದ ಉಳಿದ ರಸ್ತೆಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ಪರಿಶೀಲನೆ ಮಾಡುತ್ತೇನೆ.

ಶ್ರೀ ಸಿ. ಎಂ ಎನ್. ಶಾಸ್ತ್ರಿ.—ಚಿಕ್ಕಮಗಳೂರಿನಲ್ಲಿ ತಾಲ್ಲೂಕುಬೋರ್ಡ್ ವಶದಲ್ಲಿರತಕ್ಕಂಥ 28 ಮೈಲಿ ರಸ್ತೆಗಳನ್ನು ವಹಿಸಿಕೊಂಡು, ಅದಕ್ಕೆ ಒಟ್ಟು 3,68,954 ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಇನ್ನು ಉಳಿದಿರತಕ್ಕಂಥ ರಸ್ತೆಗಳಿಗೆ ಎಷ್ಟು ರೂಪಾಯಿಗಳು ಖರ್ಚು ಮಾಡಬೇಕಾಗಿದೆ, ಸ್ವಾಮಿ ?

ಶ್ರೀ ಕೆ. ಲಕ್ಕಪ್ಪ.—ಆ ವಿವರ ನನ್ನಲ್ಲಿಲ್ಲ.

ಶ್ರೀ ಎಂ. ಮಲ್ಲಪ್ಪ.—ಈ ರಾಜ್ಯನಿಧಿಯ ರಸ್ತೆಗಳನ್ನಾಗಿ ತೆಗೆದುಕೊಳ್ಳಬೇಕಾದರೆ ಏನಾದರೂ ನಿಯಮವಿದೆಯೇ ? ಬರುವ ವರ್ಷದೊಳಗೆ ಎಷ್ಟು ರಸ್ತೆಗಳನ್ನು ರಾಜ್ಯನಿಧಿಯ ರಸ್ತೆಗಳನ್ನಾಗಿ ಮಾಡಬೇಕು ಎಂದು ನಿರ್ಧಾರ ಮಾಡಿದ್ದೀರಿ ?

ಶ್ರೀ ಕೆ. ಲಕ್ಕಪ್ಪ.—ಈಗಾಗಲೇ ನಮ್ಮ ಉಪಮಂತ್ರಿಗಳು ಆ ಪ್ರಶ್ನೆಗೆ ಉತ್ತರ ಹೇಳಿದ್ದಾರೆ. ಎಲ್ಲೆಲ್ಲಿ ಆವಶ್ಯಕತೆ ಇದೆಯೋ ಅದನ್ನು ಪರಿಶೀಲನೆ ಮಾಡಿ, ಎಲ್ಲೆಲ್ಲಿ ತೆಗೆದುಕೊಳ್ಳಬೇಕೋ ಅಲ್ಲಲ್ಲಿ ತೆಗೆದುಕೊಳ್ಳುತ್ತಾರೆ. ಮುಂದೆ ಕೆಲವು ಮೈಲಿಗಳ ರಸ್ತೆಗಳನ್ನು ರಾಜ್ಯನಿಧಿಯ ರಸ್ತೆಗಳನ್ನಾಗಿ ತೆಗೆದುಕೊಳ್ಳಬೇಕೆನ್ನುವ ಉದ್ದೇಶ ಸರ್ಕಾರ ಯೋಚನೆ ಮಾಡುತ್ತಾ ಇದೆ. ಇಷ್ಟೇ ಮೈಲಿ ತೆಗೆದುಕೊಳ್ಳಬೇಕೆಂಬ ನಿರ್ಧಾರವಿಲ್ಲ.